ಮುಂದೆ ಹೋದ. ಸ್ವಲ್ಪವೂ ಸದ್ದಾಗಬಾರದೆಂದು ಕಾಲಲ್ಲಿದ್ದ ಹವಾಯಿ ಚಪ್ಪಲಿಗಳನ್ನು ಕಳಚಿ ಬಗಲಲ್ಲಿಟ್ಟುಕೊಂಡ. ಏನೂ ಕಾಣದಿದ್ದರೂ ಅವನಿಗೆ ತಾನೆಲ್ಲಿದ್ದೇನೆ ಎಂದು ಗೊತ್ತಿತ್ತು. ನೆನಪಿಗೆ ಲಗ್ಗೆ ಹಾಕಿ ಪ್ರತಿಯೊಂದನ್ನೂ ಕಣ್ಣ ಮುಂದೆ ತಂದುಕೊಂಡ. ಎಷ್ಟೋ ಸಲ ಅದೇ ರಸ್ತೆಯಲ್ಲಿ ನಡೆದಾಡಿದ್ದವನಿಗೆ ಪ್ರತಿಯೊಂದು ಮೂಲೆ, ಪ್ರತಿಯೊಂದು ಪೊದೆ, ಪ್ರತಿಯೊಂದು ಲೈಟುಕಂಬ, ಪ್ರತಿಯೊಂದು ಕಾಂಪೌಂಡು ಎಲ್ಲೆಲ್ಲಿದ್ದವೆಂಬ ಅರಿವಿತ್ತು. ಮರದ ರೆಂಬೆಗಳನ್ನು ತೂಗಾಡಿಸುತ್ತಿರುವ ಗಾಳಿ. ಬೀದಿ ದೀಪಕ್ಕೆ ಮುತ್ತುತ್ತಿರುವ ಹುಳುಗಳು. ದೂರದಲ್ಲೆಲ್ಲೋ ಬೊಗಳುವ ನಾಯಿ. ಏನಾದರೂ ಆಗಲಿ, ನಾಳೆಯೇ ಕೆಲಸ ಮುಗಿಸಿಬಿಡಬೇಕು ಎಂದುಕೊಂಡ ಶಿವಶಂಕರ.

ಮರುದಿನ ರಾತ್ರಿ ಮೊದಲೇ ನಿರ್ಧರಿಸಿದ್ದ ಹಾಗೆ ಎಚ್ಚರಗೊಂಡ. ಗಡಿಯಾರ ಎರಡು ಗಂಟೆ ಇಪ್ಪತ್ತು ನಿಮಿಷ ತೋರಿಸುತ್ತಿತ್ತು. ಏಳುವ ಮನಸ್ಸಿಲ್ಲದಿದ್ದರೂ ತಾನು ಮಾಡಬೇಕಾಗಿದ್ದ ಕೆಲಸದ ನೆನಪಾಗಿ ಮೇಲೆದ್ದವನು ಮುಖಕ್ಕೆ ನೀರು ಬಡಿದುಕೊಂಡ. ತನ್ನ ಸೈಕಲ್ಲಿನ ಕ್ಯಾರಿಯರ್ ಮೇಲೆ ಹತ್ತು ಹನ್ನೆರಡು ಇಟ್ಟಿಗೆ, ಸಿಮೆಂಟು, ಜಲ್ಲಿಕಲ್ಲುಗಳಿದ್ದ ಒಂದು ಗೋಣಿಚೀಲವನ್ನೂ ಹಾರೆ ಕರಣೆ ಬಾಂಡ್ಲಿ ತುಂಡು ರಿಪೀಸು ತೂಗುಗುಂಡು, ಇತ್ಯಾದಿ ತುಂಬಿಕೊಂಡ ಇನ್ನೊಂದು ಚೀಲವನ್ನೂ, ನೀರು ತುಂಬಿದ ಎರಡು ಪ್ಲಾಸ್ಟಿಕ್ ಬಾಟಲುಗಳನ್ನೂ ಕಟ್ಟಿಕೊಂಡು ಹೊರಟ. ಬೆಂಗಳೂರು ಬೀದಿಗಳಲ್ಲಿ, ಮನೆಗಳಲ್ಲಿ ಮುದುರಿಕೊಂಡು ನಿದ್ರಿಸುತ್ತಿತ್ತು.

ಮಾಗಿಕಾಲದ ಮುಂಜಾವು. ಸಿಮೆಂಟು ಬಣ್ಣಕ್ಕೆ ತಿರುಗಿ ಮಬ್ಬುಮಬ್ಬಾದ ವಾತಾವರಣ. ಬೀದಿ ದೀಪದ ಬೆಳಕಿನಲ್ಲಿ ಮನೆಮನೆಗಳ ಕಿಟಕಿ ಗಾಜುಗಳಿಗೆ ಅಂಟಿಕೊಂಡಿದ್ದ ಮಳೆ ಹನಿಗಳು ಫಳಫಳನೆ ಹೊಳೆಯುತ್ತಿದ್ದವು. ಸಂಪಿಗೆ, ಬಾದಾಮಿ ಮರಗಳಿಂದ ತೊಟ್ಟು ಕಳಚಿಕೊಂಡು ಬಿದ್ದ ಹಣ್ಣೆಲೆಗಳು ನೆಲಕ್ಕೆ ಕಂದು, ಹಳದಿ ಬಣ್ಣ ಹಾಸಿದ್ದವು. ಅವುಗಳಿಂದ ಒಂದು ಬಗೆಯ ಹುದುಗಿನ ವಾಸನೆ. ಆ ಹೊತ್ತಿಗೆ ಅಪ್ಪಿತಪ್ಪಿ ಕೂಡ ಒಂದೂ ವಾಹನದ ಸದ್ದಿಲ್ಲದೆ ನಿಶ್ಶಬ್ದವೇ ಕುಣಿಯುತ್ತಿದ್ದಂತಿತ್ತು. ಶಿವಶಂಕರ ತನ್ನದೇ ಭಾರವಾದ ಉಸಿರನ್ನು ಕೇಳಿಸಿಕೊಳ್ಳುತ್ತಿದ್ದ. ಅವನು ಹೆಜ್ಜೆಯಿಟ್ಟ ಹಾಗೆಲ್ಲ ನೆಲದ ಮೇಲಿದ್ದ ತರಗೆಲೆಗಳು ಸರಪರವೆಂದು ಸದ್ದು ಮಾಡುತ್ತ ಮುರುಟಿಕೊಳ್ಳುತ್ತಿದ್ದವು.


ಕಲೆ: ರಾಥೋಡ್

ಒಂದು ತಿರುವು ತಿರುಗಿ ಆ ಮನೆ ಸಮೀಪಿಸುತ್ತಿದೆ ಎನ್ನಿಸಿದಾಗ ಗಡಿಯಾರ ನೋಡಿಕೊಂಡ. ನಾಲ್ಕು ಗಂಟೆ ಇಪ್ಪತ್ತೂರು ನಿಮಿಷ. ಪ್ರಶಸ್ತವಾದ ಸಮಯ ಎನ್ನಿಸಿ ಖುಷಿಯಾದ ಮರುಕ್ಷಣವೇ ಅವನ ಎದೆ ಧಸಕ್ಕೆಂದಿತು. ಸ್ವಲ್ಪ ದೂರದಲ್ಲಿರುವಾಗಲೇ ಮನೆಯ ಮುಂಭಾಗದ ಎರಡು ಕಿಟಕಿಗಳಲ್ಲಿ ಧಗ್ಗೆಂದು ದೀಪ ಹೊತ್ತಿಕೊಂಡಿತು. ಮನೆಯಲ್ಲಿದ್ದವರು ಜೋರಾಗಿ ಮಾತಾಡುತ್ತಿದ್ದ ಸದ್ದು ಅವನಿದ್ದಷ್ಟು ದೂರಕ್ಕೇ ಕೇಳಿಸಿತು. ಅದೆಲ್ಲ ತನ್ನ ಭ್ರಮೆ ಎಂದು ಅರಿವಾಗಲು ಸ್ವಲ್ಪ ಹೊತ್ತೇ ಆಯಿತೆನ್ನಬೇಕು. ಅವನು ಗೇಟಿನ ಮುಂದೆ ಸೈಕಲ್ಲಿಗೆ ಸ್ಟ್ಯಾಂಡು ಹಾಕಿ ನಿಲ್ಲಿಸಿ ಕ್ಷಣ ಹೊತ್ತು ಆ ಮನೆಯನ್ನೇ ದಿಟ್ಟಿಸಿದಾಗ ಒಂದು ವಿಚಾರ ಹೊಳೆದು ಇದ್ದಕ್ಕಿದ್ದಂತೆ ನಡುಗಿಬಿಟ್ಟ. ಯಾರಾದರೂ ಮನೆಯೊಳಗಿರಬಹುದೆ? ಇಲ್ಲ ಇಲ್ಲ, ಹಿಂದಿನ ದಿನ ಸಂಜೆ ರೈಲ್ವೇ ಸ್ಟೇಷನ್ನಿನಲ್ಲಿ ತಾನೇ ಕಣ್ಣಾರೆ ನೋಡಿದ್ದಲ್ಲವೆ? ಇನ್ನು ತಡಮಾಡಿದರೆ ಕೆಲಸ ಕೆಟ್ಟ ಹಾಗೆ. ಹಾರೆಯಿಂದ ಮಧ್ಯದ ಮೆಟ್ಟಿಲ ಅರ್ಧದಷ್ಟನ್ನು ಒಡೆದುಹಾಕಿದ. ಒಡೆದುಹಾಕಿದ ಜಾಗದಲ್ಲಿ ಇಟ್ಟಿಗೆಗಳನ್ನು ಕೂರಿಸಿ ಹೊಸದಾಗಿ ಕಟ್ಟಿ